ಕನ್ನಡದ ಮುಂಚೂಣಿಯ ಬರಹಗಾರ ಚಿದಾನಂದ ಸಾಲಿ ರಾಯಚೂರಿನವರು. ಗಣಿತಶಾಸ್ತ್ರ, ಪತ್ರಿಕೋದ್ಯಮ, ಇಂಗ್ಲಿಷ್, ಶಿಕ್ಷಣಶಾಸ್ತ್ರ ಹಾಗೂ ಕನ್ನಡದಲ್ಲಿ ಸ್ನಾತಕೋತ್ತರ ಪದವೀಧರರು. ಕಥೆ, ಕವಿತೆ, ಗಜಲ್, ನಾಟಕ, ಪ್ರಬಂಧ, ಸಂದರ್ಶನ, ಸಂಶೋಧನೆ, ಸಂಪಾದನೆ ಮತ್ತು ಅನುವಾದ ಪ್ರಕಾರಗಳಲ್ಲಿ ಈವರೆಗೆ 24 ಕೃತಿಗಳನ್ನು ರಚಿಸಿದ್ದಾರೆ.

ವಾಚ್ಯತೆ (ಸ್ವಲ್ಪಮಟ್ಟಿಗೆ ಅಸ್ಪಷ್ಟತೆ ಕೂಡ, ವಿಶೇಷವಾಗಿ ಅಲ್ಲಮನಲ್ಲಿ) ಇರುವುದನ್ನು ನಾವು ನೋಡಿದ್ದೇವೆ ಮತ್ತು ವಚನಗಳನ್ನು ನಾವು ಕಾವ್ಯವೆಂದೇ ಒಪ್ಪಿಕೊಂಡಿದ್ದೇವೆ. ಅದು ಹಾಗಿರುವುದೂ ಹೌದು.

ನಾನು ಕಾವ್ಯ ಬರೆಯುವುದನ್ನು ಪ್ರಾರಂಭಿಸಿದ್ದು ನವೋದಯದ ಮಾದರಿಯಲ್ಲಿ. ಅಂತ್ಯಪ್ರಾಸವುಳ್ಳ ಮತ್ತು ಛಂದೋಬದ್ಧವಾದ ಕವಿತೆಗಳನ್ನು ನಾನು ಆಗ ಬರೆಯುತ್ತಿದ್ದೆ. ನವ್ಯ ಕಾವ್ಯವು ನಮ್ಮ ನಡುವಿಗೆ ಬಂದಾಗ ನಾನೂ ಅದರ ಕಡೆಗೆ ಹೋಗದಿದ್ದರೆ 'ಉಳಿಗಾಲವಿಲ್ಲ' ಅನಿಸಿತು. ಅದರ ಅಭ್ಯಾಸಕ್ಕೆ ತೊಡಗಿದಾಗ, ಅಡಿಗ, ಲಂಕೇಶ, ರಾಮಚಂದ್ರ ಶರ್ಮ, ಚೆನ್ನಯ್ಯ ಮೊದಲಾದವರ ಕವಿತೆಗಳಲ್ಲಿ ನಾನು 'ವಾಚ್ಯ'ವನ್ನು ಕಂಡುಕೊಂಡೆ. ನಾಟಕೀಯತೆಯೂ ನವ್ಯ ಕಾವ್ಯದ ಒಂದು ಗುಣ ಎಂದು ಅಡಿಗರು ಭಾವಿಸಿದಂತೆ (ಉದಾ: ಗೊಂದಲಪುರ, ಹಿಮಗಿರಿಯ ಕಂದರ ಇತ್ಯಾದಿ) ಅಸ್ಪಷ್ಟತೆಯೂ ಅದರ ಇನ್ನೊಂದು ಗುಣ (ಕೂಪಮಂಡೂಕ, ಶ್ರೀರಾಮನವಮಿಯ ದಿನ ಇತ್ಯಾದಿ) ಎಂಬಂತೆ ಅವರು ಕಾವ್ಯವನ್ನು ಕಟ್ಟುತ್ತಿದ್ದುದರಿಂದ ನನ್ನ ಕವನಗಳು ವಾಚ್ಯವಾಗಿದ್ದರೆ 'ತಪ್ಪಲ್ಲ' ಅನಿಸಿತು. ಆದರೆ, ಈಚೆಗೆ ನನ್ನ ನವ್ಯೋತ್ತರ ಕವಿತೆಗಳಲ್ಲಿ ವಾಚ್ಯತೆ ಕಡಿಮೆಯಾಗಿದೆ. ಲಯ ಮತ್ತು ಬಂಧದ ಕಡೆಗೆ ಹೆಚ್ಚು ಲಕ್ಷ್ಯ ಇದೆ ಎಂದುಕೊಂಡಿದ್ದೇನೆ.

ನಿಜ, ನಾನು ಅಂತರ್ಮುಖಿಯಲ್ಲ. ನನ್ನ ಮಾತು ನೇರ ಮತ್ತು ಸರಳ. ಆದ್ದರಿಂದ 'ಮೊಗಸಾಲೆ ಮುಗ್ಧರು' ಎಂಬ ಬಿರುದು ನನಗೆ ಸಿಕ್ಕಿದೆ. ಅದು ನಿಜ ಇರಬಹುದು! ಈ ವಾಚಾಳಿತನ ಮತ್ತು ಮುಗ್ಧತೆ ನನಗೇನೂ 'ಅಪಾಯ' ತಂದಿಲ್ಲ. ಹಾಗೆಂದು 'ನಾನು ಮೋಸ ಹೋಗಿಲ್ಲ' ಎನ್ನಲಾರೆ. ದುಡ್ಡಿನಲ್ಲಿ ಅಲ್ಲ; ಸ್ನೇಹದಲ್ಲಿ! ನನ್ನಲ್ಲಿ ಕಪಟಪ್ರೀತಿ ಮತ್ತು ವಿಶ್ವಾಸವನ್ನು ತೋರುತ್ತಿದ್ದ ಕೆಲವು ಸಾಹಿತಿ ಮಿತ್ರರು, ತಮ್ಮ 'ಬೇಳೆ' ಬೇಯಿಸಿಕೊಂಡು ಆದ ಮೇಲೆ, ನನ್ನನ್ನು ಮರೆತದ್ದಕ್ಕೆ ಹತ್ತಾರು ಉದಾಹರಣೆಗಳು ನನ್ನಲ್ಲಿವೆ.

◆ **ನವೋದಯ, ನವ್ಯ ಮತ್ತು ಬಂಡಾಯಗಳನ್ನು ಹಾದು ಬಂದು ಕೂಡಾ ನೀವು ವಿಶಿಷ್ಟವಾದ ಅಭಿವ್ಯಕ್ತಿ ಮಾರ್ಗವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದೀರಿ. ಎಲ್ಲ ಸಾಹಿತ್ಯಿಕ ಪಂಥಗಳ ಪ್ರಭಾವಳಿಯಿಂದ ಹೊರಗುಳಿದು ಅನ್ಯರಾಗಿ, ಭಿನ್ನವಾಗಲು ಹಂಬಲಿಸಿದ್ದೀರಿ. ಅದರ ಹಿಂದಿನ ಪ್ರೇರಣೆಗಳೇನು? ನೀವೇ ಕಂಡುಕೊಂಡಂತೆ ಅದರಿಂದ ನಿಮ್ಮ ಕಾವ್ಯದ ಮೇಲಾದ ಪರಿಣಾಮಗಳೇನು?**

ನಮ್ಮ ಆಧುನಿಕ ಸಾಹಿತ್ಯವು ಇಪ್ಪತ್ತನೆಯ ಶತಮಾನದಲ್ಲಿ ಹಲವು ಮಹತ್ವದ ಸಾಹಿತಿಗಳನ್ನು ಕೊಟ್ಟ ಹಾಗೆ ಅನೇಕ ಚಳವಳಿಗಳಿಗೂ ಸ್ಪಂದಿಸಿದ್ದು ನಮಗೆ ಗೊತ್ತು. ನವೋದಯವು ಪಾಶ್ಚಿಮಾತ್ಯ ಸಾಹಿತ್ಯದಿಂದ ಪ್ರೇರಣೆಗೊಂಡು ಈ ನೆಲದ ಸತ್ವಹೀರಿ ಈ ನೆಲದ ಸಾಹಿತ್ಯವಾಗಿ ದಶಕಗಳು ಕಳೆದಾಗ, ಇದರಲ್ಲಿ ಇನ್ನು ಹೊಸತನ ಕಾಣಿಸುವುದು ಸಾಧ್ಯವಿಲ್ಲ ಎಂದು ಮೊದಲು ಪ್ರಗತಿಶೀಲ ಆಮೇಲೆ ನವ್ಯ ಪಂಥಗಳು ಕಾಣಿಸಿಕೊಂಡವು. ಹೊಸತನಕ್ಕೆ ತೆರೆದುಕೊಂಡ ಈ ಸಾಹಿತ್ಯ ಪ್ರಕಾರಗಳು ಕೂಡಾ ಏಕತಾನತೆಯಿಂದ ಮತ್ತೆ ನೆಲಕಚ್ಚಿದಾಗ, ಪ್ರಗತಿಶೀಲತೆಯ ಇನ್ನೊಂದು ಮುಖವಾದ ಬಂಡಾಯ ಸಾಹಿತ್ಯ ಪ್ರಕಾರವು ಕಾಣಿಸಿಕೊಂಡಿದ್ದು ಆ ದಿನಗಳ ಅವಶ್ಯಕತೆಯೇ ಆಗಿತ್ತು. ನವ್ಯ ಸಾಹಿತ್ಯದಲ್ಲಿ ಆತ್ಮಗತವಾಗಿದ್ದ ಪರಕೀಯತೆ, ಅನಾಥಪ್ರಜ್ಞೆ, ಅಸ್ತಿತ್ವವಾದಗಳು ಈ ನೆಲದವಲ್ಲ, ಎಂಬ ಎಚ್ಚರ ನವ್ಯ ಸಾಹಿತ್ಯದಲ್ಲೇ ಇದ್ದ ಚಂಪಾ ಮೊದಲಾದವರಿಗೆ ನಿಧಾನವಾಗಿ ಕಂಡು, ವ್ಯವಸ್ಥೆಯ ವಿರುದ್ಧದ ಸಾಹಿತ್ಯ ಬೇಕು ಎಂಬ ನಿಲುವಿಗೆ ಬಂದದ್ದೂ ಸಹಜವೇ. ಸಾಹಿತ್ಯದ ಈ 'ಅವಸ್ಥಾಂತರಗಳು' ನನಗೂ ಆಗ